# 207

**II**

Total No. of Questions – 16
Total No. of Printed Pages – 4

Regd. No.

## Part - II
## KANNADA, Paper – II
## (Second Language)

**Time : 3 Hours]** **[Max. Marks : 100**

I. (A) ಈ ಕೆಳಗಿನ ಪದ್ಯಗಳಲ್ಲಿ ಒಂದರ ಭಾವಾರ್ಥ ಬರೆಯಿರಿ. $1 \times 5 = 5$

ಉಣದಿರ್ಪಾ ಧನಮಿರ್ದೊಡೇನು ಸುತನಿರ್ದೇಂ ಮುಪ್ಪಿನಲ್ಲಾಗದಾ।
ಒಣಗಲ್ಪೈರಿಗೆ ಬಾರದಿರ್ದ ಮಳೆ ತಾಂ ಬಂದೇನಾಪತ್ತಿನೊಳ್॥
ಮಣಿದುಂ ನೋಡದ ಬಂಧುವೇತಕೆಣಿಸಲ್ ಕಾಲೋಚಿತಕ್ಕೈದಿದಾ।
ತೃಣವೇ ಪರ್ವತವಲ್ಲವೇ ಹರಹರಾ ಶ್ರೀ ಚೆನ್ನಸೋಮೇಶ್ವರಾ॥

ಅಥವಾ

ತೈಲ ತೀರಿದೆಯೆಂದು
ತಿಳಿದೇ ತಿಳಿದೀತು
ದೀಪ ಆರಿದ ಮೇಲೆ
ಆತ್ಮಕ್ಕೆ ಕಮಟು ಹತ್ತುವ ತನಕ
ಬತ್ತಿ ಮುಗಿದಿದೆ ಎಂದು
ತಿಳಿವುದಾದರೂ ಹೇಗೆ ?

(B) ಈ ಕೆಳಗಿನ ಇಬ್ಬರು ಕವಿ/ಲೇಖಕರಲ್ಲಿ ಒಬ್ಬರ ಪರಿಚಯ ಬರೆಯಿರಿ. $1 \times 5 = 5$

(1) ದ.ರಾ. ಬೇಂದ್ರೆ (2) ನೇಮಿಚಂದ್ರ

II. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ ಒಂದಕ್ಕೆ 20 ವಾಕ್ಯಗಳು ಮೀರದಂತೆ ಉತ್ತರಿಸಿ. $1 \times 5 = 5$

(1) ಜೀವನದ ಉದ್ದೇಶ ಮತ್ತು ಆದರ್ಶಗಳನ್ನು ಹೇಗೆ ಸಫಲಗೊಳಿಸಿಕೊಳ್ಳಬೇಕೆಂದು ಬೇಂದ್ರೆ ಕರೆ ಕೊಡುತ್ತಾರೆ ? ವಿವರಿಸಿ.

(2) ಸಮಾಜ ಕಂಟಕರ ಬಗೆಗೆ ಪುರಂದರದಾಸರ ಅಭಿಪ್ರಾಯಗಳನ್ನು ಸಂಗ್ರಹಿಸಿ ಬರೆಯಿರಿ.

III. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ** 20 ವಾಕ್ಯಗಳು ಮೀರದಂತೆ ಉತ್ತರಿಸಿ. $1 \times 5 = 5$

(1) ಚಿನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು ? ವಿಶ್ಲೇಷಿಸಿ.

(2) ಅಂತರಾಷ್ಟ್ರೀಯ ವಿದ್ಯಮಾನಗಳಿಂದಾಗಿ ವಾಲ್‌ಪರ್‍ಯೆಗೆ ಒದಗಿದ ಸಮಸ್ಯೆಗಳೇನು ?

IV. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ** 20 ವಾಕ್ಯಗಳು ಮೀರದಂತೆ ಉತ್ತರಿಸಿ. $1 \times 5 = 5$

(1) ತನ್ನ ಆನೆಯ ಬಗ್ಗೆ ಕೃಷ್ಣೇಗೌಡರಲ್ಲಿ ಬೇಸರ ಮೂಡಲು ಕಾರಣಗಳೇನು ?

(2) ಬೀದಿನಾಯಿಗಳ ನಿವಾರಣೆಗೆ ಖಾನ್ ಸಾಹೇಬರು ತೆಗೆದುಕೊಂಡಿದ್ದ ಕ್ರಮಗಳಾವವು ?

V. ಈ ಕೆಳಗಿನ ನಾಲ್ಕರಲ್ಲಿ **ಎರಡಕ್ಕೆ** ಸಂದರ್ಭ ಸೂಚಿಸಿ ವಿವರಿಸಿ ಬರೆಯಿರಿ. $2 \times 3 = 6$

(1) ರಣಾಗ್ರದೊಳ್ ಪಿಡಿದು ತಂದಾಂ ಕೊಟ್ಟಪೆಂ

(2) ತಾನೆ ಲಘುಮಾಡಿ ಲಘುವಾದನಯ್ಯ

(3) ತೃಣವೇ ಪರ್ವತವಲ್ಲವೇ

(4) ಬಿನ್ನಾಣದ ಮಾತಿಗೆ ಕೊನೆಯಿಲ್ಲ

VI. ಈ ಕೆಳಗಿನ ನಾಲ್ಕರಲ್ಲಿ **ಎರಡಕ್ಕೆ** ಸಂದರ್ಭ ಸೂಚಿಸಿ ವಿವರಿಸಿ. $2 \times 3 = 6$

(1) ಆಪರೇಷನ್ ಆಗಬೇಕು, ಪರವಾಗಿಲ್ಲವಾ ?

(2) ನಿನಗಾವ ರಸದೊಳಿಷ್ಟಂ ?

(3) ಅದು ಯಾವ ಶಸ್ತ್ರಕ್ಕೂ ಮಣಿಯದು.

(4) ಒಂದೊಂದು ಭಾಷೆಯೂ ಒಂದೊಂದು ವರ.

VII. ಈ ಕೆಳಗಿನ ನಾಲ್ಕರಲ್ಲಿ **ಎರಡಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿ. $2 \times 2 = 4$

(1) ಯಾವ ಗುಣಗಳಿಲ್ಲದವನು ಡಾಂಭಿಕನೆನಿಸುತ್ತಾನೆ ?

(2) ಗುರುವಿನ ಲಕ್ಷಣಗಳೇನು ?

(3) ಶುಚಿ ಮತ್ತು ಸ್ವಾದವನ್ನು ಕುರಿತು ಸೋಮನಾಥನ ಅಭಿಪ್ರಾಯವೇನು ?

(4) ಯಾರಿಗೆ ತತ್ವಜ್ಞಾನ ಹೇಳಿ ಪ್ರಯೋಜನವಿಲ್ಲ ?

VIII. ಈ ಕೆಳಗಿನ ನಾಲ್ಕರಲ್ಲಿ ಎರಡಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ. $2 \times 2 = 4$

(1) ಬ್ರಿಟಿಷರು ಬರುವ ಮೊದಲು ವಾಲ್‌ಪರೈ ಹೇಗಿತ್ತು ?

(2) ಯಾವ ಉತ್ತರಗಳಿಂದ ಲೇಖಕಿಗೆ ತೃಪ್ತಿಯಾಗಲಿಲ್ಲ ?

(3) ಲೇಖಕರಿಗೆ ಕನ್ನಡ ಪ್ರೀತಿ ಸ್ಫುರಿಸಿದ್ದು ಹೇಗೆ ?

(4) ಕನ್ನಡದ ಸಮಸ್ಯೆಗಳು ಎಲ್ಲಿಯವರೆಗೂ ಇದ್ದೆ ಇರುತ್ತವೆ ?

IX. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರಿಸಿ. $5 \times 1 = 5$

(1) ಗಂಡರೋ ನೀವ್ ಭಂಡರೋ ಎಂದು ಕೇಳಿದವರಾರು ?

(2) ಮಯತನೂಜೆ ಎಂದರೆ ಯಾರು ?

(3) ಶಿವಪಥವನ್ನು ಅರಿಯದಿದ್ದರೇನಾಗುವುದು ?

(4) ಹಲವು ಹಳ್ಳಗಳು ಸೇರಿ ಏನಾಗುತ್ತದೆ ?

(5) ಜಾಲಿಯ ಮರದಂತಿರುವವರು ಯಾರು ?

X. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರಿಸಿ. $5 \times 1 = 5$

(1) ಬಸಲಿಂಗನ ಹೆಂಡತಿಯ ಹೆಸರೇನು ?

(2) ಕೆಂಪುಪೆಟ್ಟಿಗೆ ಸೇರಿದ ಪ್ರಾಣಿ ಯಾವುದು ?

(3) ಬದುಕು ಯಾವುದನ್ನು ಬಿಟ್ಟು ಇರುವುದಿಲ್ಲ ?

(4) ಬೆಳ್ಳಿಲೋಟ ಏನನ್ನು ಕಳೆದುಕೊಂಡಿತ್ತು ?

(5) ದುರಾಸೆಯ ಹುಡುಗನನ್ನು ನಿರಾಕರಿಸಿದವರು ಯಾರು ?

XI. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. $5 \times 1 = 5$

(1) ದುರ್ಗಪ್ಪ ಏನನ್ನು ಕೇಳಿ ಪಡೆಯಲು ಬಂದಿದ್ದನು ?

(2) ಕೃಷ್ಣೇಗೌಡರ ಆನೆ ಮೊದಲು ಯಾವ ಮಠದಲ್ಲಿತ್ತು ?

(3) ನಿರೂಪಕರ ಇಕಾಲಜಿಸ್ಟ್ ಗೆಳೆಯ ಯಾರು ?

(4) ಪೋಸ್ಟಮನ್ ಜಬ್ಬಾರನಿಗೆ ಒದಗಿದ ತೊಂದರೆ ಏನು ?

(5) ಮುನ್ಸಿಪಾಲಿಟಿ ಪ್ರೆಸಿಡೆಂಟರ ಹೆಸರೇನು ?

XII. ಈ ಕೆಳಗಿನ ಛಂದಸ್ಸುಗಳಲ್ಲಿ ಒಂದರ ಲಕ್ಷಣಗಳನ್ನು ಬರೆಯಿರಿ. $1 \times 5 = 5$

(1) ಕಂದ (2) ಭೋಗ ಷಟ್ಪದಿ (3) ಚಂಪಕಮಾಲಾವೃತ್ತ

XIII. ಈ ಕೆಳಗಿನ ಪದ್ಯಗಳಲ್ಲಿ ಒಂದಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರು ಬರೆಯಿರಿ. $1 \times 5 = 5$

(1) ಜಾನಕಿ ಮೂರ್ಛಿತೆಯಾಗೆ ದ
ಶಾನನನನುಕಂಪೆ ಪುಟ್ಟಿ ಕರುಣಿಸಿ ತನ್ನಂ

(2) ಮೆಲ್ಲಮೆಲ್ಲನೆ ಮುಸುಕ ಸಡಿಲಿಸಿ
ಗಲ್ಲವನು ಹಿಡಿದಲುಗಲಪ್ರತಿ
ಮಲ್ಲನೆದ್ದನು ನೋಡಿದನು ಪಾಂಚಾಲ ನಂದನೆಯ

(3) ಕೆಲವಂ ಬಲ್ಲವರಿಂದ ಕಲ್ತುಕೆಲವಂ ಶಾಸ್ತ್ರಂಗಳಂ ಕೇಳುತಂ

XIV. ಈ ಕೆಳಗಿನ ಮೂರರಲ್ಲಿ ಒಂದರ ಅಲಂಕಾರವನ್ನು ಗುರುತಿಸಿ ಬರೆಯಿರಿ. $1 \times 5 = 5$

(1) ಸೀತೆಯ ಮುಖವು ಬೆಳದಿಂಗಳ ಚಂದ್ರನಂತೆ ಹೊಳೆಯುತ್ತಿತ್ತು.

(2) ಮಾತು ಬಲ್ಲವಗೆ ಜಗಳವಿಲ್ಲ, ಊಟ ಬಲ್ಲವಗೆ ರೋಗವಿಲ್ಲ.

(3) ಆ ಗಿಡಗಳು ಮುಗಿಲು ಮುದ್ದಿಡುತ್ತವೆ.

XV. (A) ಈ ಕೆಳಗಿನ ಪದಗಳಲ್ಲಿ ಐದಕ್ಕೆ ಅರ್ಥ ಬರೆಯಿರಿ. $5 \times 1 = 5$

(1) ಧುರ (2) ಮಾನಿನಿ (3) ಓರ್ವಂ (4) ಧರೆ
(5) ಪಟಹ (6) ಅರೆ (7) ಕಾಲಾಳು (8) ತೊರೆ

(B) ಈ ಕೆಳಗಿನ ಪದಗಳಲ್ಲಿ ಆರಕ್ಕೆ ವಿರುದಾರ್ಥ ಬರೆಯಿರಿ. $6 \times 1 = 6$

(1) ಶುದ್ಧ (2) ಪಂಡಿತ (3) ಸಮ (4) ಅಳಿವು
(5) ಬೇಡು (6) ಪ್ರಾಚೀನ (7) ಮೂಡು (8) ಅಂತರಂಗ

(C) ಈ ಕೆಳಗಿನ ಎಲ್ಲಾ ಪದಗಳಿಗೆ ಒಂದೊಂದು ಸ್ವಂತ ವಾಕ್ಯ ರಚನೆ ಮಾಡಿರಿ. $5 \times 1 = 5$

(1) ಮೈದಾನ (2) ವಿರುದ್ಧ (3) ಜಗಳ
(4) ಲೆಕ್ಕಣಿಕೆ (5) ಪುಸ್ತಕ

XVI. (A) ಈ ಕೆಳಗಿನವುಗಳಲ್ಲಿ ಎರಡಕ್ಕೆ ಟಿಪ್ಪಣಿ ಬರೆಯಿರಿ. $2 \times 2 = 4$

(1) ವಿಭಕ್ತಿ ಪ್ರತ್ಯಯಗಳು (2) ಅನುನಾಸಿಕ ಸಂಧಿ (3) ಪ್ರಕೃತಿ ಭಾವ (4) ಲೋಪಸಂಧಿ

(B) ಈ ಕೆಳಗಿನವುಗಳಲ್ಲಿ ಒಂದಕ್ಕೆ ಪ್ರಬಂಧ ಬರೆಯಿರಿ. $1 \times 5 = 5$

(1) ಜಲದ ಮಹತ್ವ
(2) ಹಸುವಿನ ಉಪಯೋಗಗಳು
(3) ಅಭ್ಯಾಸದ ಬಲ